# ಮರದ ತುಂಬ ಕಾಯಿ

'ಬಳ್ಳಿಗೆ ಕಾಯಿ ಭಾರವೆ, ಹೆತ್ತ ತಾಯಿಗೆ ಮಗುವು ಭಾರವೆ' ಎಂಬ ಹಾಡಿನ ಸಾಲಿನಂತೆ, ಮೈತುಂಬ ಕಾಯಿಗಳನ್ನು ಹೊತ್ತ ಈ ಹಲಸಿನ ಮರ ಕಂಡುಬಂದಿದ್ದು ಹೊಸನಗರ ತಾಲ್ಲೂಕು ಕೋಡೂರಿನಲ್ಲಿ. ಹಲಸಿನ ಸುಗ್ಗಿಯಲ್ಲಿ ಊರವರಿಗೆಲ್ಲ ಹಂಚುವಷ್ಟು ಹಣ್ಣುಗಳನ್ನು ಈ ಒಂದೇ ಮರ ಬಿಟ್ಟಿದೆ! ಪ್ರಕೃತಿ ಎಂಬುದು ಸದಾ ಸೃಜನಶೀಲ ಹಾಗೂ ಜೀವಂತ ಎಂಬುದಕ್ಕೆ ಈ ಚಿತ್ರ ಒಂದು ಜ್ವಲಂತ ಸಾಕ್ಷಿ.

—ಎಚ್.ಎಸ್. ನವೀನಕುಮಾರ್ ಹೊಸದುರ್ಗ





# ಇದೇನಿದು ಬಳ್ಳಿ ಪಪ್ಪಾಯಿ

ಪಪ್ಪಾಯಿ (ಪರಂಗಿ) ಮರದಲ್ಲಿ ಕಾಯಿಗಳು ಕಾಂಡಕ್ಕೆ ಅಂಟಿಕೊಂಡಂತೆ ಇರುತ್ತವೆ. ಕಾಂಡದ ಸುತ್ತಲೂ ಕಾಯಿಗಳಿದ್ದು, ಬೆಳೆದು ಹಣ್ಣಾಗುತ್ತವೆ. ಶ್ರವಣಬೆಳಗೊಳ– ಚನ್ನರಾಯಪಟ್ಟಣ ಮುಖ್ಯರಸ್ತೆಯ ರೈತರೊಬ್ಬರ ಹೊಲದಲ್ಲಿರುವ ಪಪ್ಪಾಯಿ ಗಿಡದಲ್ಲಿ ಕಾಯಿಗಳು ಕಾಂಡಕ್ಕೆ ಅಂಟಿಕೊಂಡಿಲ್ಲ. ಕಾಯಿಗಳೆಲ್ಲವೂ ಬಳ್ಳಿಯಲ್ಲಿ ಜೋತು ಬಿದ್ದಿವೆ. ಈ ಮರವು ಕವಲೊಡೆದಿದ್ದೂ ಆ ಭಾಗದಲ್ಲೂ ಕಾಯಿಗಳು ಜೋತು ಬಿದ್ದಿವೆ.

—ಎಸ್.ಎನ್. ಅಶೋಕ ಕುಮಾರ್, ಶ್ರವಣಬೆಳಗೊಳ

# ರೆಡ್ ಮುನಿಯನ ಚೆಲುವು

ರಾಯಚೂರಿನ ಹೊರವಲಯದಲ್ಲಿ ಕ್ಯಾಮೆರಾ ಹಿಡಿದು ಒಂದು ದಿನ ಹೊರಟಿದ್ದೆ. ಆ ದಿನ ಅಪರೂಪದ ಪಕ್ಷಿಯೊಂದು ಕಣ್ಣಿಗೆ ಬಿತ್ತು. ಅದನ್ನು ಹಾಗೆ ಬಿಟ್ಟರೆ ನೆನಪಿನಿಂದಲೂ 'ಹಾರಿ' ಹೋಗಬಹುದೆಂದು ಸೆರೆ ಹಿಡಿದುಕೊಂಡು ಬಂದೆ.

ಪಕ್ಷಿಯ ಫೋಟೊ ತೆಗೆದದ್ದು ಮನಸ್ಸಿಗೆ ಎಲ್ಲಿಲ್ಲದ ಆನಂದವನ್ನು ಉಂಟುಮಾಡಿದೆ. ತೀರಾ ಸಣ್ಣದಾಗಿದ್ದರೂ ಚುರುಕಾಗಿದೆ. ಕಣ್ಣೋಟದಲ್ಲಿಯೇ ಸರೆ ಹಿಡಿಯಲು ಹಟ ತೊಟ್ಟು ನಿಂತು ಹರಸಾಹಸ ಪಡಬೇಕಾಯಿತು! ಕುಂತಲ್ಲಿ ಕೂಡದೇ ಹಾರುತ್ತಿತ್ತು.

ಅದಕ್ಕಾಗಿ ಒಂದು ವಾರ ಅಲೆದೆ. ಕೊನೆಗೊಮ್ಮೆ ದೂರದಿಂದಲೇ ಕ್ಯಾಮೆರಾ ಲೆನ್ಸ್ ಬಳಸಿಕೊಂಡು ಫೋಟೊ ತೆಗೆದೆ. ನಂತರ ಮನೆಗೆ ಬಂದು ಪಕ್ಷಿಗಳ ಪುಸ್ತಕಗಳನ್ನು ತಿರುವಿ ಹಾಕಿದಾಗ ಈ ಪಕ್ಷಿಯ ವಿವರ ಸಿಕ್ಕಿತು. ಈ ಪಕ್ಷಿಯ ಹೆಸರು ಕೆಂಪು ರಾಟವಾಳ. ಇಂಗ್ಲಿಷ್‌ನಲ್ಲಿ ಇದಕ್ಕೆ ರೆಡ್ ಮುನಿಯ ಅಥವಾ ಸ್ಟ್ರಾಬೇರಿ ಫಿಂಚ್ ಅಥವಾ ಅವಡವತ್ ಎಂದು ಕರೆಯುತ್ತಾರೆ. ನೋಡಲು ಸುಂದರವಾಗಿ ಇರುವುದರಿಂದ ಇದನ್ನು ಕೆಲವರು ಪಂಜರದಲ್ಲಿ ಸಾಕುತ್ತಾರೆ. ಹೆಣ್ಣು ಪಕ್ಷಿ ಮಂಕುಬಣ್ಣದ್ದಾಗಿರುತ್ತದೆ. ಅಲ್ಲಲ್ಲಿ ಬಿಳಿಚುಕ್ಕಿಗಳು ಅಸ್ಪಷ್ಟವಾಗಿ ಕಾಣಿಸುತ್ತವೆ. ಆದರೆ ಗಂಡು ಹಕ್ಕಿ ಮೈ ಎಲ್ಲಾ ಕೆಂಪಾಗಿದ್ದು ಬಿಳಿಯ ಚುಕ್ಕಿಗಳು ಸ್ಪಷ್ಟವಾಗಿ ಕಂಡುಬರುತ್ತವೆ. ಹುಲ್ಲುಗಾವಲು, ಬಯಲು ಹೊಲಗಳಲ್ಲಿ ಇದು ವಾಸಿಸುತ್ತದೆ.

—ಈರಣ್ಣ ಬೆಂಗಾಲಿ, ರಾಯಚೂರು

